
# ಶ್ರೀರಾಮಕೃಷ್ಣರ ಬಗ್ಗೆ ಶ್ರೀಮಾತೆಯವರು

ಪಿ. ಉಷಾ

ಲೀಲಾಸಂಗಿನಿ

ಶ್ರೀಶಾರದಾದೇವೀ ಸುಪ್ರಭಾತದಲ್ಲಿ ಶ್ರೀಮಾತೆ ಶಾರದಾ ದೇವಿಯವರನ್ನು ಹೀಗೆ ವರ್ಣಿಸಲಾಗಿದೆ:

ಶ್ರೀರಾಮಕೃಷ್ಣದಯಿತೇ ತದಧೀನಸತ್ತ್ವೇ
ತದ್ಭಕ್ತವೃಂದಪರಿಪಾಲಿನಿ ಮುಕ್ತಿದಾತ್ರಿ ।
ತದ್ಭಾವರಕ್ತಹೃದಯೇ
ತದಭಿನ್ನತತ್ತ್ವೇ
ಮಾತಃ ಸಮಸ್ತ ಜಗತಾಂ
ತವ ಸುಪ್ರಭಾತಮ್ ॥



"ಶ್ರೀರಾಮಕೃಷ್ಣರಿಗೆ ಪ್ರಿಯಳಾದವಳೇ, ಅವರಿಗೆ ಅಧೀನವಾದ ಬಾಳ್ವೆಯುಳ್ಳವಳೇ, ಅವರ ಭಕ್ತವೃಂದವನ್ನು ಪಾಲಿಸುವವಳೇ, ಮುಕ್ತಿಯನ್ನು ನೀಡುವವಳೇ, ಅವರ ಭಾವದಲ್ಲಿ ಪ್ರೀತಿಯುಳ್ಳವಳೇ, ತತ್ತ್ವತಃ ಅವರಿಂದ ಬೇರೆಯಲ್ಲದ ಜಗಜ್ಜನನಿ, ನಿನಗೆ ಶುಭೋದಯವಾಗಲಿ."

ಶ್ರೀಮಾತೆ ಶಾರದಾದೇವಿಯವರು ಯುಗಾವತಾರ ಶ್ರೀರಾಮಕೃಷ್ಣರ ಲೀಲಾಸಂಗಿನಿಯಾಗಿ ಅವತರಿಸಿದ ಜಗನ್ಮಾತೆ; ಶ್ರೀರಾಮಕೃಷ್ಣರೇ ಹೇಳುವಂತೆ ಜಗದ ಜನರಿಗೆ ಜ್ಞಾನವೀಯಲು ಧರೆಗಿಳಿದು ಬಂದ ಸರಸ್ವತಿ. ಭಗವಂತನ ತಾಯ್ತನವನ್ನು ತೋರಿಕೊಡಲೆಂದೇ ಶ್ರೀರಾಮಕೃಷ್ಣರು ತನ್ನನ್ನು ಬಿಟ್ಟುಹೋಗಿರುವರೆಂದು ಒಂದೆಡೆ ಅವರು ಹೇಳಿದ್ದಾರೆ. ಅವರು ಒಂದು ಸಲ ತಮ್ಮ ಪೂಜಾನಂತರ ಭಕ್ತರೊಬ್ಬರು, "ನೀವು ರಾಮಕೃಷ್ಣರನ್ನು ಹೇಗೆ ಕಾಣುತ್ತೀರಿ?" ಎಂದು ಪ್ರಶ್ನಿಸಲು, "ನಾನವರನ್ನು ಮಗುವಿನಂತೆ ಕಾಣುತ್ತೇನೆ" ಎಂದು ಉತ್ತರಿಸಿದ್ದರು. ಅವರ ಮಹಿಮೆಯ ಬಗ್ಗೆ ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ಶಾರದಾನಂದರ ಅಭಿಪ್ರಾಯ ಹೀಗಿದೆ: "ಶ್ರೀರಾಮಕೃಷ್ಣರ ಘನತೆಯ ಬಗೆಗಾದರೂ ನಮಗೊಂದಿಷ್ಟು ಇಣುಕುನೋಟ ದೊರೆಯಬಹುದು; ಆದರೆ ಮಾಯೆಯ ಮುಸುಕನ್ನು ದಟ್ಟವಾಗಿ ಹೊದ್ದುಕೊಂಡಿರುವ ಶ್ರೀಶಾರದಾದೇವಿಯವರ ಹಿರಿಮೆಯನ್ನು ಕಾಣುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ."

> ಶ್ರೀಮಾತೆಯವರು ಶ್ರೀರಾಮಕೃಷ್ಣರನ್ನು ಸಾಕ್ಷಾತ್ ಭಗವಂತನೆಂದೇ ಭಾವಿಸಿದ್ದರು, ಹಾಗೆಯೇ ನಡೆದುಕೊಳ್ಳುತ್ತಿದ್ದರು ಕೂಡ. ಹಾಗೆಂದೇ ಅವರು ವಿವಿಧ ಸಂದರ್ಭಗಳಲ್ಲಿ ತಮ್ಮ ಪತಿದೇವರ ಬಗ್ಗೆ ನುಡಿದ ನುಡಿಗಳು ಮಹತ್ವವನ್ನು ಪಡೆದುಕೊಳ್ಳುತ್ತವೆ. ಇದನ್ನು ಸವಿಸ್ತಾರವಾಗಿ, ವಿವಿಧ ಆಯಾಮಗಳಲ್ಲಿ ನಮಗೆ ಪರಿಚಯಿಸಿರುವ ಲೇಖಿಕೆ, ವಾರಾಣಸಿಯ ನಿವಾಸಿ; ಆಶ್ರಮದ ಭಕ್ತರು.

ಶ್ರೀರಾಮಕೃಷ್ಣರ ದೈವೀಭಾವಗಳನ್ನು ಕಂಡು ಅವರು ಭಗವಂತನೆಂಬ ಭಾವನೆಯು ಹಲವರಿಗಿದ್ದರೂ, ಅತ್ಯಂತ ಸರಳ ಬಾಹ್ಯಾಡಂಬರರಹಿತ ಜೀವನವನ್ನು ನಡೆಸುತ್ತಿದ್ದ ಶ್ರೀಶಾರದಾದೇವಿಯವರನ್ನು ಕಂಡಾಗ ಆಕೆ ಜಗಜ್ಜನನಿ ಭಗವತಿಯೆಂಬ ವಿಶ್ವಾಸ ವಿದ್ದುದು ಕೆಲವರಿಗೆ ಮಾತ್ರವೇ. ಆದ್ದರಿಂದ ಭಕ್ತನೊಬ್ಬನು ಅವರ ದೈವತ್ವದ ಬಗ್ಗೆ ಅವಿಶ್ವಾಸವನ್ನು ತಳೆದಾಗ ಸ್ವಾಮಿ ಶಾರದಾನಂದರು, ಭಗವಂತನು ಒಬ್ಬ ಸಾಮಾನ್ಯ ಬೆರಣಿ ತಟ್ಟುವ ಹೆಂಗಸಿನ ಮಗಳನ್ನು ವಿವಾಹವಾಗಿರುವುದು ಖಂಡಿತವಾಗಿ ಸಾಧ್ಯವಿಲ್ಲ ಎಂದು ಸುಸ್ಪಷ್ಟವಾಗಿ ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು. ಶ್ರೀರಾಮಕೃಷ್ಣ ಸಂಘ ಸ್ತೋತ್ರದಲ್ಲಿ ಅವರು **"ಯಥಾಗ್ನೇರ್ದಾಹಿಕಾ ಶಕ್ತೀ, ರಾಮಕೃಷ್ಣೇ ಸ್ಥಿತಾ ಹಿ ಯಾ"** – ಅಗ್ನಿ ಹಾಗೂ ಸುಡುವ ಶಕ್ತಿ ಅಭೇದವಾಗಿರುವಂತೆ, ಶ್ರೀರಾಮಕೃಷ್ಣ ಹಾಗೂ ಶ್ರೀಶಾರದಾದೇವಿಯವರು ಅಭಿನ್ನರೆಂದು ವರ್ಣಿಸಿರುವರು. ಶ್ರೀರಾಮಕೃಷ್ಣರು ಚೈತನ್ಯಸ್ವರೂಪ ಭಗವಂತನಾದರೆ, ಶ್ರೀಶಾರದಾದೇವಿಯವರು ಸರ್ವಶಕ್ತಿಮಯಿ ಭಗವತಿ; ಶ್ರೀರಾಮಕೃಷ್ಣರನ್ನರಿತರೆ ಶ್ರೀಶಾರದಾದೇವಿಯರನ್ನು ಅರಿತಂತೆ; ಶ್ರೀಶಾರದಾದೇವಿಯವರನ್ನು ತಿಳಿದರೆ ಶ್ರೀರಾಮಕೃಷ್ಣರನ್ನು ತಿಳಿದಂತೆ. ಒಬ್ಬರನ್ನು ಅರ್ಥಮಾಡಿಕೊಳ್ಳಲು ಇನ್ನೊಬ್ಬರ ಕೃಪೆಯು ಅತ್ಯಾವಶ್ಯಕ. ಭಕ್ತ ಮಹಿಳೆಯೊಬ್ಬಳು ಶ್ರೀಮಾತೆಯವರನ್ನೊಮ್ಮೆ ಕೇಳುತ್ತಾಳೆ, "ನೀವು ಸ್ವಯಂ ಭಗವತಿ ಎನ್ನುವುದು ನಮಗರ್ಥವಾಗುತ್ತಿಲ್ಲವಲ್ಲ." ಇದಕ್ಕೆ ಶ್ರೀಮಾತೆಯವರು ಹೀಗೆನ್ನುತ್ತಾರೆ,

"ಎಲ್ಲರೂ ಗುರುತಿಸುವುದಕ್ಕೆ ಆಗುವುದೇ ಮಗು? ಸ್ನಾನದ ಘಟ್ಟದಲ್ಲಿ ಒಂದು ವಜ್ರ ಬಿದ್ದಿತ್ತು. ಅಲ್ಲಿಗೆ ಬರುವವರೆಲ್ಲ ಅದು ಸಾಧಾರಣ ಕಲ್ಲೆಂದು ಭಾವಿಸಿ, ಅದರ ಮೇಲೆ ಕಾಲುಜ್ಜಿ, ತೊಳೆದು ಸ್ನಾನಮಾಡಿ ಹೋಗುತ್ತಿದ್ದರು. ಒಂದು ದಿನ ರತ್ನಪಡಿ ವ್ಯಾಪಾರಿಯೊಬ್ಬ ಅದನ್ನು ನೋಡಿ, ಅದೊಂದು ಅತ್ಯಂತ ಬೆಲೆಬಾಳುವ ವಜ್ರವೆಂದು ಕ್ಷಣಾರ್ಧದಲ್ಲಿ ಗುರುತಿಸಿದ." "ಶ್ರೀರಾಮ ಕೃಷ್ಣರು ಸಾಕ್ಷಾತ್ ಭಗವಂತ, ನಾನು ಮತ್ತಾರು? ನಾನು ಸಹ ಭಗವತಿ" – ಹೀಗೆ ಶ್ರೀರಾಮಕೃಷ್ಣರ ಜೀವನವನ್ನು ಪರಿಪೂರ್ಣ ಗೊಳಿಸಲೆಂದು ಅವರೊಡನೆ ಬಂದವರೇ ಶ್ರೀಶಾರದಾದೇವಿ. ಇದನ್ನರಿತ ಶ್ರೀರಾಮಕೃಷ್ಣರು ಆಕೆಯನ್ನು ಅತ್ಯಂತ ಪ್ರೀತ್ಯಾದರ ಗಳಿಂದ ಕಾಣುತ್ತಿದ್ದರು. ಶ್ರೀಮಾತೆಯವರು ಹೇಳುತ್ತಾರೆ, "ಶ್ರೀರಾಮಕೃಷ್ಣರು ನನ್ನನ್ನೆಂದೂ ಅಗೌರವದಿಂದ 'ನೀನು' ಎಂಬ ಏಕವಚನದಿಂದ ಸಂಬೋಧಿಸಿದವರಲ್ಲ ..... ಅವರೆಂದೂ ನನಗೆ ಒಂದು ಹೂವಿನಿಂದ ಕೂಡ ಹೊಡೆದು ನೋವುಂಟು ಮಾಡಿಲ್ಲ."

## ಶ್ರೀಮಾತೆಯವರ 'ಠಾಕೂರ್'

ಶ್ರೀರಾಮಕೃಷ್ಣ–ಶಾರದಾದೇವಿಯವರದು ದೈವೀ ಜನನ. ಶ್ರೀಮಾತೆಯವರು ತಮ್ಮ ಎಳೆ ವಯಸ್ಸಿನಲ್ಲಿ ಶ್ರೀರಾಮಕೃಷ್ಣರನ್ನು (ಆಗ ಯುವಕ ಗದಾಧರ) ತಮ್ಮ ಭಾವೀ ಪತಿಯೆಂದು ಗುರುತಿಸಿದ್ದಾರೆ. ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿರುವ ಮಗನು ವಿವಾಹವಾದರೆ ಸರಿಹೋಗುತ್ತಾನೆಂದು ಬಗೆದು ಹೆಣ್ಣು ಹುಡುಕುವ ಪ್ರಯತ್ನದಲ್ಲಿ ತೊಡಗಿದ್ದ ತಾಯಿಗೆ ಶ್ರೀರಾಮಕೃಷ್ಣರು, ಜಯರಾಂಬಾಟಿಯ ಶ್ರೀ ರಾಮಚಂದ್ರಮುಖರ್ಜಿಯವರ ಪುತ್ರಿಯೇ ತನಗೆ ತಕ್ಕ ಪತ್ನಿಯೆಂದು ಗುರುತಿಸಿದ್ದು ಗಮನಾರ್ಹ ಹಾಗೂ ಅಚ್ಚರಿಯ ಸಂಗತಿಯೆ ಸರಿ. ಇನ್ನೂ ಅದ್ಭುತವೆಂದರೆ ವಿವಾಹಾನಂತರ ಅವರ ಜೀವನವು ಸಾಮಾನ್ಯರು ನಡೆಸುವ ವೈವಾಹಿಕ ಜೀವನದಂತಿರಲಿಲ್ಲ. ಶ್ರೀರಾಮಕೃಷ್ಣರು ಶ್ರೀಮಾತೆ ಯವರಿಗೆ ಐಹಿಕ ಹಾಗೂ ಆಧ್ಯಾತ್ಮಿಕ ತರಬೇತಿಯನ್ನು ನೀಡು ತ್ತಿದ್ದರೂ, ಶ್ರೀಮಾತೆಯವರು ಶ್ರೀರಾಮಕೃಷ್ಣರನ್ನು ಸಾಮಾನ್ಯ ಗುರುವಿನಂತೆಯೂ ಕಾಣುತ್ತಿರಲಿಲ್ಲ.

ಪತಿ–ಸತಿ, ಗುರು–ಶಿಷ್ಯೆ ಇವೆರಡೂ ಸಂಬಂಧಗಳನ್ನು ಅವರಿಬ್ಬರೂ ಮೀರಿ ನಿಂತಿದ್ದರೂ ತಮ್ಮ ಆರಾಧ್ಯದೇವರಾದ ಪತಿಯ ಬಗ್ಗೆ ಮಾತನಾಡುವಾಗ, ಎಂದೂ ಒಮ್ಮೆಯೂ ಕೂಡ ವ್ಯಕ್ತಿಗತ ಸಂಬಂಧದ ಕುರುಹೂ ಶ್ರೀಮಾತೆಯವರ ಮಾತಿನಲ್ಲಿ ಕಾಣಿಸಿಕೊಳ್ಳುತ್ತಿರಲಿಲ್ಲವೆಂದು ಭಗಿನಿ ನಿವೇದಿತಾ ಹೇಳುತ್ತಾರೆ. ಆದ್ದರಿಂದಲೇ ಶ್ರೀರಾಮಕೃಷ್ಣರ ವಿಷಯದಲ್ಲಿ ಶ್ರೀಶಾರದಾದೇವಿ ಯವರ ಮಾತುಗಳು ಪ್ರಾಮಾಣಿಕ. ಶ್ರೀಶಾರದಾದೇವಿಯವರಿಗೆ ಶ್ರೀರಾಮಕೃಷ್ಣರು ಸಾಕ್ಷಾತ್ ಭಗವಂತನೇ ಆಗಿದ್ದರು. ಅವರೆನ್ನು ತ್ತಾರೆ: "ಶ್ರೀರಾಮಕೃಷ್ಣರು ನನಗೆ ಪೂರ್ಣ ಬ್ರಹ್ಮ ಸನಾತನರು– ಪತಿಯೆಂಬ ಸಾಮಾನ್ಯ ದೃಷ್ಟಿಯಲ್ಲೂ ಹೌದು ಹಾಗೂ ವಿಶೇಷ ದೃಷ್ಟಿಯಲ್ಲೂ ಇದು ಸತ್ಯ." ಶ್ರೀರಾಮಕೃಷ್ಣರ ಬಗ್ಗೆ ಮಾತನಾಡು ವಾಗಲೆಲ್ಲ ಶ್ರೀಮಾತೆಯವರು ಅವರನ್ನು 'ಠಾಕೂರರು' ಎಂದು ಉಲ್ಲೇಖಿಸುತ್ತಿದ್ದರು. 'ಠಾಕೂರ್' ಎಂದರೆ ಬಂಗಾಳಿಯಲ್ಲಿ 'ಒಡೆಯ' ಅಥವಾ 'ದೇವರು' ಎಂದರ್ಥ.

ಶ್ರೀರಾಮಕೃಷ್ಣರ ದೈವೀ ಸೌಂದರ್ಯವನ್ನು ಕುರಿತು ಶ್ರೀಮಾತೆ ಯವರು ಬಣ್ಣಿಸುತ್ತಾರೆ: "ಠಾಕೂರರದು ಸ್ವರ್ಣಕಾಂತಿ. ಅವರು ತೊಟ್ಟಿದ್ದ ಚಿನ್ನದ ತೋಳುಬಂದಿ ಅವರ ಹೊಂಬಣ್ಣದ ಮೈಕಾಂತಿ ಯಲ್ಲಿ ಒಂದಾಗಿ ಬೆರೆತು ಮಿರುಗುತ್ತಿತ್ತು. ಅವರು ದಾರಿಯಲ್ಲಿ ನಡೆದು ಹೋಗುತ್ತಿದ್ದರೆ ಜನರು, 'ಅದೋ ನೋಡು, ಠಾಕೂರರು ಬರುತ್ತಿದ್ದಾರೆ!' ಎಂದು ಉದ್ಗರಿಸುತ್ತಿದ್ದರು. ಒಮ್ಮೆ ದಕ್ಷಿಣೇಶ್ವರದ ಕಾಳೀಮಂದಿರಕ್ಕೆ ಗೌರವವರ್ಣದ ವ್ಯಕ್ತಿಯೊಬ್ಬರು ಭೇಟಿಯಿತ್ತರು. ಠಾಕೂರರು ನನಗೆ ಹೇಳಿದರು, 'ನಾವಿಬ್ಬರೂ ಜೊತೆ–ಜೊತೆಗೆ ಪಂಚವಟಿಯಲ್ಲಿ ತಿರುಗಾಡುತ್ತೇವೆ. ನಮ್ಮಿಬ್ಬರಲ್ಲಿ ಯಾರು ಹೆಚ್ಚು ಬೆಳ್ಳಗಿರುವರೆಂದು ನೀನು ಹೇಳು.' ನೋಡಿದರೆ ಆ ವ್ಯಕ್ತಿಯೇ ಠಾಕೂರರಿಗಿಂತ ಒಂದಿಷ್ಟು ಹೆಚ್ಚು ಬೆಳ್ಳಗಿದ್ದರು." ಇದು ಶ್ರೀಮಾತೆಯವರು ಠಾಕೂರರ ಬಗ್ಗೆ ನೀಡಿದ ನಿಷ್ಪಕ್ಷಪಾತ ಅಭಿಪ್ರಾಯದ ಒಂದು ಉದಾಹರಣೆ ಅಷ್ಟೆ.

## ಸಾಕ್ಷಾತ್ ಭಗವಂತ

ಶ್ರೀರಾಮಕೃಷ್ಣರು ಭಗವಂತನೆಂಬುದು ಶ್ರೀಮಾತೆಯವರ ಸ್ವಂತ ಅನುಭವಕ್ಕೆ ಬಂದ ವಿಚಾರ. ಇದನ್ನು ಅವರು ಹಲವಾರು ಸಂದರ್ಭಗಳಲ್ಲಿ ನಿರ್ದಿಷ್ಟವಾಗಿ ನುಡಿದಿದ್ದಾರೆ: "ಠಾಕೂರರು ಹಾಗೂ ನಾನು ಅಭಿನ್ನರೆಂದು ತಿಳಿ. ಮತ್ತೆ, ಅವರನ್ನು ಪೂಜಿಸಿ ದರೆ ಸಕಲ ದೇವದೇವಿಯವರನ್ನೂ ಪೂಜಿಸಿದಂತೆ.... ಮಂತ್ರ– ತಂತ್ರಗಳು ಮುಖ್ಯವಲ್ಲ, ಭಕ್ತಿಯೇ ಸಾರವು. ಶ್ರೀರಾಮಕೃಷ್ಣರಲ್ಲೇ ಗುರು ಹಾಗೂ ಇಷ್ಟದೇವರು–ಇಬ್ಬರನ್ನೂ ಕಾಣಬಹುದು. ಅವರೇ ಎಲ್ಲವೂ ಆಗಿದ್ದಾರೆ. ಠಾಕೂರರೇ ಮಹೇಶ್ವರ–ಮಹೇಶ್ವರಿಯರು. ಸರ್ವದೇವದೇವೀ ಸ್ವರೂಪರೂ, ಸರ್ವಬೀಜಸ್ವರೂಪರೂ ಅವರೇ. ಅವರು ಮಾನಸಾದೇವಿಯೂ ಹೌದು, ಗಂಗೆಯೂ ಹೌದು." ಶ್ರೀರಾಮಕೃಷ್ಣರು ಭಗವಂತನ ಪೂರ್ಣಾವತಾರವೆಂದು ಶ್ರೀಮಾತೆ ಯವರು ಹೇಳುತ್ತಾರೆ: "ಠಾಕೂರರು ಭಗವಂತನ ಅಂಶಮಾತ್ರ ವೆಂದುಕೊಂಡೆಯಾ? ಅವರು ಪರಿಪೂರ್ಣರು... ಜಗತ್ತು ಬ್ರಹ್ಮ ಮಯ. ನೀನು ಕಾಣುವುದೆಲ್ಲ ಸತ್ಯವೆ, ಯಾವುದೂ ಮಿಥ್ಯೆ ಯಲ್ಲ. ಎಲ್ಲವೂ ಶ್ರೀರಾಮಕೃಷ್ಣರೇ ಆಗಿರುವರು. ಅವರೇ ಪ್ರಕೃತಿ, ಅವರೇ ಪುರುಷ. ಎಲ್ಲವೂ ಅವರಿಂದಲೇ ಪ್ರಕಟಗೊಂಡಿರು ವುದು."

ಶ್ರೀರಾಮಕೃಷ್ಣರೊಂದಿಗೆ ತಾವು ಅವತಾರವೆತ್ತಿ ಬಂದ ಉದ್ದೇಶ ವನ್ನು ಕುರಿತು ಅವರೊಮ್ಮೆ ಹೀಗೆ ಹೇಳುತ್ತಾರೆ: "ನಾನು ಕಣ್ಣಾರೆ ಕಾಣುತ್ತಿರುವೆ, ಶ್ರೀರಾಮಕೃಷ್ಣರು ಎಲ್ಲಾ ರೂಪಗಳಲ್ಲಿ ಇದ್ದಾರೆ. ಕುರುಡರು, ಕುಂಟರು ಎಲ್ಲ ಅವರೇ; ಜೀವಿಗಳ

ನೋವು, ಸಂಕಟ ಎಲ್ಲಾ ಅವರದೇ. ಆದ್ದರಿಂದ ಅವರೆಲ್ಲರ ದುಃಖವನ್ನು ದೂರ ಮಾಡಲು ನಾನೂ ಕೆಲಸ ಮಾಡ ಬೇಕಾಗಿದೆ." ಶ್ರೀಮಾತೆಯವರ ಕೊನೆಗಾಲದಲ್ಲಿ ಅವರು ಅನುಭವಿಸುತ್ತಿದ್ದ ಶಾರೀರಿಕ ಕಷ್ಟಗಳನ್ನು ಕಂಡ ಅವರ ಸಂನ್ಯಾಸಿ ಮಕ್ಕಳು, "ಅಮ್ಮ, ಈ ಸಲ ನೀವು ಗುಣಮುಖರಾದಾಗ ಯಾರಿಗೂ ಮಂತ್ರದೀಕ್ಷೆಯನ್ನು ಕೊಡಬೇಡಿ. ಜನರ ಪಾಪಗಳನ್ನು ಸ್ವೀಕರಿಸುವುದರಿಂದಲೇ ನೀವು ಇಷ್ಟೊಂದು ಕಷ್ಟವನ್ನು ಅನುಭವಿಸ ಬೇಕಾಗಿರುವುದು" ಎಂದಾಗ, "ಹಾಗೇಕೆನ್ನುವೆ? ಠಾಕೂರರು ಈ ಬಾರಿ ರಸಗುಲ್ಲಾ ತಿನ್ನಲೆಂದು ಮಾತ್ರವೇ ಅವತರಿಸಿ ಬಂದರೆ?" ಎನ್ನುತ್ತ ಠಾಕೂರರೊಂದಿಗೆ ತಾವು ಬಂದಿರುವುದು ಏಕೆಂಬುದನ್ನು ಪರೋಕ್ಷವಾಗಿ ತಿಳಿಸುತ್ತಾರೆ.

ಸ್ವದೇಶೀ ಆಂದೋಲನವು ಭರದಿಂದ ಸಾಗುತ್ತಿದ್ದ ಕಾಲವದು. "ಅಮ್ಮ, ಈ ದೇಶದ ದುಃಖದುರ್ದೆಸೆಗಳಿಗೇನು ಅಂತ್ಯವಿಲ್ಲವೆ?" ಎಂಬ ಪ್ರಶ್ನೆಗೆ ಶ್ರೀಮಾತೆಯವರ ಉತ್ತರವಿದು: "ಠಾಕೂರರು ಅದಕ್ಕಾಗಿಯೇ ಬಂದಿದ್ದರು." ಅವರೆನ್ನುತ್ತಾರೆ, "ಠಾಕೂರರು ಲೋಕದ ಜನರ ಕಷ್ಟ ನಿವಾರಣೆಗಾಗಿಯೇ ಮನುಷ್ಯರೂಪದಲ್ಲಿ ಅವತರಿಸಿದ ದೇವರು. ರಾಜನು ಛದ್ಮವೇಷದಲ್ಲಿ ನಗರ ಸಂಚಾರ ಮಾಡುವಂತೆ ಅವರೂ ಓಡಾಡಿಕೊಂಡಿದ್ದರು. ಜನರು ಅವರನ್ನು ಗುರುತಿಸಿದ ಕೂಡಲೇ ಜಗತ್ತನ್ನು ಬಿಟ್ಟು ಹೊರಟು ಹೋದರು."

ವಿವಿಧ ಭಾವಗಳಲ್ಲಿ ಶ್ರೀರಾಮಕೃಷ್ಣ

ಯುಗಾವತಾರ ಶ್ರೀರಾಮಕೃಷ್ಣರ ಸಹಜ ಸ್ಥಿತಿಯೇ ಸಮಾಧಿ ಸ್ಥಿತಿಯಾಗಿದ್ದರೂ ಸಹ, ಸಕಲ ಮನುಜರ ಕಲ್ಯಾಣಕ್ಕಾಗಿ ಅನುಕಂಪದಿಂದ ಕೂಡಿದ ಅವರ ಮನಸ್ಸನ್ನು ಮಾಯಾ ಪ್ರಪಂಚಕ್ಕಿಳಿಸುತ್ತಿದ್ದರು. ಅವರ ಕರುಣಾರ್ದ್ರ ಹೃದಯವನ್ನು ಕುರಿತು ಶ್ರೀಮಾತೆಯವರೆನ್ನುತ್ತಾರೆ– "ಠಾಕೂರರು ಎಂದೂ ಮಾಯೆಯಲ್ಲಿ ಸಿಲುಕಿಹಾಕಿಕೊಂಡಿರಲಿಲ್ಲ." ಒಮ್ಮೆ ಹಾಜರಾ ಹೇಳಿದ, 'ನರೇಂದ್ರ ಮುಂತಾದವರ ಬಗ್ಗೆ ನಿಮಗೇಕೆ ಇಷ್ಟೊಂದು ಚಿಂತೆ? ಅವರೆಲ್ಲ ತಿಂದುಂಡುಕೊಂಡು ಚೆನ್ನಾಗಿದ್ದಾರೆ. ನೀವು ಭಗವಂತನಲ್ಲಿ ಮನಸ್ಸನ್ನಿಡಿ. ನಿಮಗೇಕೆ ಇಷ್ಟೊಂದು ಮಾಯೆ?' ಅವನು ಹೇಳಿದಂತೆ ಠಾಕೂರರು ಮಾಯೆಯನ್ನು ಸಂಪೂರ್ಣ ವಾಗಿ ಕತ್ತರಿಸಿ, ಭಗವಂತನಲ್ಲಿ ಮನಸ್ಸನ್ನು ಲೀನಗೊಳಿಸಿದರು. ಆಗ ಅವರ ಮೈ ಮೇಲಿನ ಕೂದಲೆಲ್ಲ ಕದಂಬ ಪುಷ್ಪದಂತೆ ನವಿರೆದ್ದಿತು. ಆಗವರು ಹೇಗೆ ಕಂಡಿರಬಹುದೆಂದು ಭಾವಿಸಿ ನೋಡಿ. ಶರೀರವು ಮರದ ಕೊರಡಿನಂತೆ ಜಡವಾಗಿಹೋಗಿತ್ತು. ಅದನ್ನು ಕಂಡ ರಾಮಲಾಲನು ಠಾಕೂರರನ್ನು ಪ್ರಕೃತಿಸ್ಥರಾಗಲು ಬಹಳವಾಗಿ ಬೇಡಿಕೊಂಡ ನಂತರ ಅವರು ತಮ್ಮ ಮನಸ್ಸನ್ನು ಕೆಳಗಿಳಿಸಿದರು. ಜೀವರ ಮೇಲಿನ ದಯೆಯಿಂದ ಮಾತ್ರವೇ ಮನಸ್ಸನ್ನು ತಮ್ಮ ದೇಹದ ಮೇಲಿರಿಸಿದರು." ಜೀವಿಗಳ ಉದ್ಧಾರಕ್ಕಾಗಿ ಶ್ರೀರಾಮಕೃಷ್ಣರು ಮಾಡಿದ್ದ ನಾನಾ ಸಾಧನೆಗಳ ಬಗ್ಗೆ ಶ್ರೀಮಾತೆಯವರೆನ್ನುತ್ತಾರೆ: "ಈ ಮಾಯೆಯಿಂದ ಮುಕ್ತ ರಾಗಲು ಮನುಷ್ಯರಿಂದ ಸಾಧ್ಯವೆ?, ಆದ್ದರಿಂದಲೇ ಠಾಕೂರರು ಅದೆಷ್ಟು ಸಾಧನೆಗಳನ್ನು ಮಾಡಿ ಅವುಗಳ ಫಲವನ್ನು ಜೀವಿಗಳ ಉದ್ಧಾರಕ್ಕಾಗಿ ನೀಡಿ ಹೋದರು!"

ಶ್ರೀಮಾತೆಯವರಿಗೆ ತಾವು ಶ್ರೀರಾಮಕೃಷ್ಣರಿಂದ ಬೇರೆಯಲ್ಲ, ತಾವು ಸ್ವಯಂ ಭಗವತಿಯೆ ಎಂಬ ಅರಿವಿದ್ದರೂ, ಅತ್ಯಂತ ನಿರಭಿಮಾನದಿಂದ ಅವರು ಭಕ್ತನೊಬ್ಬನಿಗೆ, ಠಾಕೂರರಲ್ಲಿ ಭರವಸೆ ತಾಳಬೇಕೆಂದು ಹೀಗೆ ನಿರ್ದೇಶಿಸುತ್ತಾರೆ: "ಮಗು, ನನಗೇನೂ ಗೊತ್ತಿಲ್ಲ, ಇನ್ನು ನಾನು ನಿನಗೆ ಏನು ತಾನೆ ಹೇಳಲಿ? ಶ್ರೀಠಾಕೂರರ ಭಾವಚಿತ್ರವನ್ನು ಮುಂದಿಟ್ಟುಕೊಂಡು ಸದಾ ಅವರು ನಿನ್ನ ಜೊತೆಯಲ್ಲಿರುವರೆಂದು ವಿಶ್ವಾಸವನ್ನು ತಾಳು. ದುಃಖದಿಂದ ಕೂಡಿದ ನಿನ್ನ ಹೃದಯವನ್ನು ಅವರೆದುರು ತೆರೆದಿಡು. ಕಣ್ಣೀರ್ಗರೆದು ಹೃತ್ಪೂರ್ವಕವಾಗಿ ಪ್ರಾರ್ಥಿಸುವುದರಿಂದ ನಿನಗೆ ಮನಃಶಾಂತಿ ದೊರೆಯುತ್ತದೆ... ಶ್ರೀರಾಮಕೃಷ್ಣರಲ್ಲಿ ಭಕ್ತಿಯನ್ನು ಬೆಳೆಸಿಕೊ. ಅವರೇ ನಮ್ಮ ಆದರ್ಶ, ಅವರೇ ನಮಗೆ ಆಧಾರ. ಎಂಥ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿಯೂ ಅವರನ್ನು ಅವಲಂಬಿಸಿದ್ದೇ ಆದರೆ ನೀವೆಂದೂ ದಾರಿ ತಪ್ಪಲಾರಿರಿ." ಒಮ್ಮೆ ತಮ್ಮ ತಮ್ಮನ ಮಗಳಾದ ನಳಿನಿ, "ಅತ್ತೆ, ಜನರು ನಿನ್ನನ್ನು 'ಅಂತರ್ಯಾಮಿ' ಎನ್ನುತ್ತಾರೆ. ಇದು ಸತ್ಯವೇ?" ಎಂದಾಗ "ನಾನಾದರೂ ಯಾರು? ಸರ್ವವೂ ಠಾಕೂರರೇ. ನನ್ನನ್ನು ಅಹಂಕಾರರಹಿತಳನ್ನಾಗಿಸಲು ನೀವು ಠಾಕೂರರನ್ನು ಪ್ರಾರ್ಥಿಸಿ" ಎನ್ನುತ್ತ ಠಾಕೂರರಿಗೆ ವಿನಯಪೂರ್ವಕವಾಗಿ ಕೈಜೋಡಿಸಿ ನಮಸ್ಕರಿಸುತ್ತಾರೆ, ಶ್ರೀಮಾತೆ.

ಕಾಶಿಯಲ್ಲಿ ಮರಣ ಹೊಂದಿದವರು ಮುಕ್ತರಾಗುವರೆಂಬ ನಂಬಿಕೆಯ ಕುರಿತು ಭಕ್ತರೊಬ್ಬರು ಸಂದೇಹಪಟ್ಟಾಗ ಶ್ರೀಮಾತೆ ಯವರು, "ಠಾಕೂರರು ಪ್ರತ್ಯಕ್ಷದರ್ಶಿಗಳು. ಅವರಿಗೆ ಸಕಲವೂ ಗೋಚರವಾಗುತ್ತಿತ್ತು. ಸರ್ವಜ್ಞರಾದ ಅವರ ನುಡಿಗಳು ವೇದ ವಾಕ್ಯಗಳು. ಅವರ ಮಾತುಗಳಲ್ಲಿ ವಿಶ್ವಾಸವಿಡದೆ ಅನ್ಯ ದಾರಿ ಯುಂಟೆ?" ಎಂದು ಭಕ್ತರ ಮನದಲ್ಲಿ ವಿಶ್ವಾಸವನ್ನು ತುಂಬಿದರು. ಅನೇಕ ಬಾರಿ ಶ್ರೀಮಾತೆಯವರು ತಮಗೇನೂ ತಿಳಿಯದು, ಶ್ರೀರಾಮಕೃಷ್ಣರಿಂದ ಕೇಳಿದ್ದನ್ನೇ ತಾವು ಪುನಃ ಹೇಳುತ್ತಿರುವು ದಾಗಿಯೂ, ತಮ್ಮ ಶಿಷ್ಯರಿಗೆ ತಾವು ನೀಡುತ್ತಿದ್ದ ಮಂತ್ರಗಳು ತಾವು ಠಾಕೂರರಿಂದಲೇ ಪಡೆದ ಸಿದ್ಧಮಂತ್ರಗಳಾದ್ದರಿಂದ ಅವರ ಕೃಪೆಯಿಂದ ಭಗವಂತನನ್ನು ಪಡೆಯಲು ಸಾಧ್ಯ ಎನ್ನುತ್ತಿದ್ದರು. ಠಾಕೂರರ ಗೃಹಸ್ಥ ಶಿಷ್ಯರು, ಎಂದಿಗೂ ತಾವು ಮುಳುಗು ವುದಿಲ್ಲವೆಂಬ ಆಶ್ವಾಸನೆಯನ್ನು ಶ್ರೀಮಾತೆಯವರಿಂದ ಪಡೆ ದಿದ್ದರು. ಠಾಕೂರರ ಕೈಯಲ್ಲಿ ಮುಕ್ತಿಯ ಬೀಗದಕೈ ಇದೆ. ಧ್ಯಾನ, ಜಪ, ಪೂಜಾದಿಗಳಿಂದ ಠಾಕೂರರನ್ನು ಕರೆದರೆ ಸಂಸಾರ ಚಕ್ರದಿಂದ ಪಾರಾಗಬಹುದು. ಠಾಕೂರರು ಎಂದೆಂದಿಗೂ ನಮ್ಮವರು, ದುಃಖ ಸಂಕಷ್ಟಗಳ ನಡುವೆಯೂ ಠಾಕೂರರನ್ನು ಆಶ್ರಯಿಸಿದವರು ನಿಸ್ಸಂದೇಹವಾಗಿಯೂ ಭಗವಲ್ಲಾಭವನ್ನು

ಪಡೆಯುವರೆಂದು ಶ್ರೀಮಾತೆಯವರು ಹೇಳಿದ್ದಾರೆ. ಧ್ಯಾನ, ಜಪಾದಿಗಳು ಸುಲಭವಾಗಿ ಸಿದ್ಧಿಸುವುದಿಲ್ಲ; ಆಧ್ಯಾತ್ಮಿಕ ಪಥವು ಕತ್ತಿಯ ಅಲಗಿನಂತೆ ಎಂಬ ಶ್ರೀರಾಮಕೃಷ್ಣರ ಮಾತನ್ನು ಉಲ್ಲೇಖಿಸುತ್ತ, ಈ ಸಲ ಅವರು ಸಿರಿವಂತ–ಬಡವ, ಪಂಡಿತ–ಮೂರ್ಖ – ಎಲ್ಲರ ಉದ್ಧಾರಕ್ಕಾಗಿ ಬಂದಿರುವರು ಮತ್ತು ಠಾಕೂರರೇ ಆಧ್ಯಾತ್ಮಿಕ ಪಿಪಾಸುಗಳನ್ನು ತಮ್ಮ ಮಡಿಲಲ್ಲಿರಿಸಿಕೊಂಡು ರಕ್ಷಿಸುತ್ತಿರುವರೆಂದು ಆಕೆ ಪುನಃ ಪುನಃ ಹೇಳುತ್ತಾರೆ. ಒಮ್ಮೆ ಹತಾಶರಾಗಿದ್ದ ಸಂನ್ಯಾಸಿ ಭಕ್ತರೊಬ್ಬರ ಪತ್ರವನ್ನೋದಿದ ಶ್ರೀಮಾತೆಯವರೆಂದರು, "ಇದೇನು? ಠಾಕೂರರ ನಾಮವು ನಿಷ್ಪ್ರಯೋಜನಕಾರಿಯಾದ ಸಾಮಾನ್ಯ ಮಾತುಗಳೇನು? ಠಾಕೂರರಲ್ಲಿಗೆ ಶ್ರದ್ಧಾಪೂರ್ವಕವಾಗಿ ಬಂದವರಿಗೆ ಮರಣಕಾಲದಲ್ಲಿಯಾದರೂ ಇಷ್ಟದರ್ಶನವಾಗುವುದು ಖಂಡಿತ."

ಶ್ರೀರಾಮಕೃಷ್ಣರು ತ್ಯಾಗೀಶ್ವರರು. ತ್ಯಾಗವೇ ಅವರಿಗೆ ಭೂಷಣವಾಗಿತ್ತು. ಒಮ್ಮೆ ರಾಧು ಶ್ರೀಮಾತೆಯವರನ್ನು, "ಗಂಡನೆಂದರೆ ಏನೆಂದು ನಿನಗೇನು ಗೊತ್ತು?" ಎಂದು ಟೀಕಿಸಿದಾಗ ಅವರು ನಗುತ್ತ ಉತ್ತರಿಸಿದರು: "ತಿಳಿಯುವುದಾದರೂ ಹೇಗೆ ಹೇಳು? ನನ್ನ ಪತಿಯು ನಗ್ನ ಸಂನ್ಯಾಸಿಗಳಾಗಿದ್ದರು." ಅವರೇ ಹೇಳುವಂತೆ, ಜಗತ್ತಿನ ಜನತೆಗೆ ತ್ಯಾಗವನ್ನು ಬೋಧಿಸುವುದಕ್ಕಾಗಿ ಬಂದಿದ್ದ ಮಹಾತ್ಮರವರು. ಈ ಬಗ್ಗೆ ಶ್ರೀಶಾರದಾದೇವಿಯವರು ಹೀಗೆ ಹೇಳುತ್ತಾರೆ: "ಸರ್ವಧರ್ಮ ಸಮನ್ವಯವನ್ನು ಬೋಧಿಸುವ ಸಲುವಾಗಿ ಅವರು ಎಲ್ಲ ಧರ್ಮಗಳನ್ನು ಅಭ್ಯಾಸ ಮಾಡಿದರೆಂದು ನನಗನ್ನಿಸುವುದಿಲ್ಲ. ಅವರು ಸದಾ ಸರ್ವದಾ ದೈವೀಭಾವವನ್ನು ಅನುಭವಿಸುತ್ತಿದ್ದರು. ಕ್ರೈಸ್ತರು, ಮುಸಲ್ಮಾನರು, ವೈಷ್ಣವರು ಹಾಗೂ ಇತರರಂತೆ ನಾನಾ ವಿಧದಲ್ಲಿ ಭಗವಂತನನ್ನು ಆರಾಧಿಸಿ, ಆತನ ಸಾಕ್ಷಾತ್ಕಾರವನ್ನು ಪಡೆದು, ದೈವೀಲೀಲೆಯನ್ನು ಸವಿಯುತ್ತ ಹಗಲಿರುಳುಗಳನ್ನು ಅನಾಯಾಸವಾಗಿ ಕಳೆದರು. ಆದರೆ ಈ ಯುಗಕ್ಕೆ ಅವರು ನೀಡಿರುವ ವಿಶೇಷ ಸಂದೇಶವೆಂದರೆ 'ತ್ಯಾಗ.' ಹಿಂದೆಂದಾದರೂ ಈ ರೀತಿಯ ಸಹಜ ತ್ಯಾಗವನ್ನು ಯಾರಾದರೂ ಕಂಡಿದ್ದರೆ?" ಶ್ರೀರಾಮಕೃಷ್ಣರದು ಪೂರ್ಣತ್ಯಾಗವೆಂದು ನಿರೂಪಿಸಲು ಶ್ರೀಮಾತೆ ಹಲವು ಉದಾಹರಣೆಗಳನ್ನು ಕೊಡುತ್ತಾರೆ: "ಒಂದು ದಿನ ಮಧ್ಯಾಹ್ನದ ಊಟದ ನಂತರ ಶ್ರೀರಾಮಕೃಷ್ಣರು ನಹಬತ್ತಿಗೆ ಬಂದಿದ್ದರು. ಅವರ ಚಿಕ್ಕ ಚೀಲದಲ್ಲಿ ಮಸಾಲೆ ಇರಲಿಲ್ಲ. ನಾನವರಿಗೆ ಸ್ವಲ್ಪ ಮಸಾಲೆಯನ್ನು ತಿನ್ನಲು ಕೊಟ್ಟು ಸ್ವಲ್ಪವನ್ನು ಕಾಗದದಲ್ಲಿ ಕಟ್ಟಿ ತೆಗೆದುಕೊಂಡು ಹೋಗಲು ಹೇಳಿದೆ. ಆದರೆ ಬಳಿಕ ನೋಡುತ್ತೇನೆ, ಅವರು ತಮ್ಮ ಕೋಣೆಯತ್ತ ಹೆಜ್ಜೆ ಹಾಕುವ ಬದಲು ಗಂಗೆಯಲ್ಲಿ ಮುಳುಗುತ್ತೇನೆ ಎಂದು ಪದೇ ಪದೇ ಹೇಳುತ್ತ ಗಂಗೆಯಡೆಗೆ ಹೋಗುತ್ತಿದ್ದಾರೆ. ಪ್ರಜ್ಞಾಶೂನ್ಯರಾಗಿದ್ದ ಅವರಿಗೆ ದಾರಿಯೇ ಕಾಣಿಸದಾಗಿದೆ. ಸಂನ್ಯಾಸಿಗಳು ಸಂಚಯ ಮಾಡುವಂತಿಲ್ಲ. ಆದ್ದರಿಂದಲೇ ಠಾಕೂರರಿಗೆ ದಾರಿ ಕಾಣಲಿಲ್ಲ! ಅವರದು ಹದಿನಾರಾಣೆಗಳ ಸಂಪೂರ್ಣ ತ್ಯಾಗ. ಠಾಕೂರರಿಗೆ ಹಣವನ್ನು ಸ್ಪರ್ಶಿಸಲಾಗುತ್ತಿರಲಿಲ್ಲ. ಅವರೊಮ್ಮೆ ರಾಮಲಾಲನಿಗೆ ಹೇಳಿದರು, 'ಜಗತ್ತು ಮಿಥ್ಯೆ; ಅದೇನಾದರೂ ಸತ್ಯವಾಗಿದ್ದರೆ ನಿಮ್ಮ ಕಾಮಾರಪುಕುರಕ್ಕೆ ಹೊನ್ನಿನ ಹೊದಿಕೆಯನ್ನು ಹೊದಿಸುತ್ತಿದ್ದೆ. ಆದರೆ ಭಗವಂತನ ಹೊರತು ಉಳಿದುದೆಲ್ಲವೂ ಮಿಥ್ಯೆ.' " ಠಾಕೂರರು ತ್ಯಾಗ–ವೈರಾಗ್ಯಗಳನ್ನು ಎತ್ತಿ ಹಿಡಿದಿದ್ದರ ಬಗ್ಗೆ ಶ್ರೀಮಾತೆಯವರೆನ್ನುತ್ತಾರೆ, "ನಾನವರಿಗೆ ಸಂದೇಶವನ್ನು (ಸಿಹಿ ತಿಂಡಿ) ತಿನ್ನಕೊಟ್ಟರೆ, 'ಇದರಲ್ಲೇನಿದೆ? ಸಂದೇಶ–ಮಣ್ಣು, ಎರಡೂ ಒಂದೇ' ಎನ್ನುತ್ತಿದ್ದರು. ಆದ್ದರಿಂದಲೇ ಅವರ ಆಹಾರ ಬಹಳವೇ ಸರಳವಾಗಿತ್ತು." ಮತ್ತೊಂದು ಘಟನೆ, ಶ್ರೀಮಾತೆಯವರಿಂದ ತಿಳಿದುಬರುತ್ತದೆ. ದಕ್ಷಿಣೇಶ್ವರಕ್ಕೆ ಬಂದಿದ್ದ ವೈಷ್ಣವ ಸಂನ್ಯಾಸಿಗಳೊಬ್ಬರು ಕಡೆಕಡೆಗೆ ಅನೇಕ ವಸ್ತುಗಳನ್ನು ಸಂಗ್ರಹಿಸತೊಡಗಿದಾಗ, "ನೀನೀಗ ಮಾಯೆಯಲ್ಲಿ ಸಿಕ್ಕಿಬೀಳುತ್ತಿರುವಿ" ಎನ್ನುತ್ತ ಅವರಿಗೆ ತ್ಯಾಗದ ಬಗ್ಗೆ ಉಪದೇಶಿಸಿ, ದಕ್ಷಿಣೇಶ್ವರದಿಂದ ವಿದಾಯ ಹೇಳಲು ಠಾಕೂರರು ಆದೇಶಿಸಿದರು.

ಠಾಕೂರರ ಮಾತುಗಳು ಅಮೃತಸಮಾನ. ಶ್ರೀರಾಮಕೃಷ್ಣ ವಚನವೇದವನ್ನು ಬಂಗಾಳಿಯಲ್ಲಿ 'ಶ್ರೀರಾಮಕೃಷ್ಣ ಕಥಾಮೃತ' ಎನ್ನುತ್ತಾರೆ. "ಅದನ್ನೋದಿದರೆ ಎಲ್ಲವೂ ತಿಳಿಯುವುದು; ನಿಮಗೆ ಅಗತ್ಯವಿದ್ದುದೆಲ್ಲ ಅದರಲ್ಲಿದೆ" ಎಂದು ಶ್ರೀಮಾತೆಯವರು ಹೇಳುತ್ತಾರೆ. ಒಮ್ಮೆ ಗೋಲಾಪ್ ಮಾ ಠಾಕೂರರ ಬಗ್ಗೆ ಏನಾದರೂ ಹೇಳಬೇಕೆಂದು ಶ್ರೀಮಾತೆಯವರನ್ನು ಕೇಳಿಕೊಂಡಾಗ, "ಠಾಕೂರರ ಬಗ್ಗೆ ನಾನೇನು ಹೇಳಲಿ? ಮಾಸ್ಟರ್ ಮಹಾಶಯರು ಕಥಾಮೃತದಲ್ಲಿ ಅನೇಕ ವಿಚಾರಗಳನ್ನು ಬರೆದಿದ್ದಾರೆ.... ಇಂದಿನವರೆಗೂ ಉಪಲಬ್ಧವಿರುವ ಠಾಕೂರರ ಮಾತುಗಳೆಲ್ಲವೂ ಅತ್ಯಮೂಲ್ಯ ಸಂಪತ್ತು. ಅವರ ಸಣ್ಣ ಪುಟ್ಟ ಮಾತುಗಳೂ ವೇದವಾಕ್ಯಗಳಾಗಿ ನಿಲ್ಲುವುವೆಂದು ನನಗೆ ಹೇಗೆ ತಿಳಿದಿರಬೇಕು? ಠಾಕೂರರು ಉಪದೇಶ ನೀಡಿರುವ ವಿಧಾನವು ಅದೆಷ್ಟು ಸೊಗಸಾಗಿದೆ! ಶ್ರೀರಾಮಕೃಷ್ಣರ ಒಂದೇ ಒಂದು ಉಪದೇಶವನ್ನು ಕಾರ್ಯಗತಗೊಳಿಸಿದರೆ ಸಾಕು, ಸಾಧಕನಿಗೆ ಸಕಲವೂ ಸಿದ್ಧಿಸುವುದು" ಎಂದು ಹೇಳುತ್ತ ವಚನವೇದವನ್ನು ಬಹಳವಾಗಿ ಕೊಂಡಾಡಿದ್ದಾರೆ.

ಹೀಗೆ ಶ್ರೀಮಾತೆಯವರು ತಮ್ಮ ಪತಿದೇವರನ್ನು ಹಗಲಿರುಳೂ ಸ್ಮರಿಸುತ್ತ, ಅವರಿಗೆ ತಮ್ಮ ತನು ಮನ ಪ್ರಾಣಗಳನ್ನು ಸಮರ್ಪಿಸಿಕೊಂಡು ಜೀವನ ನಡೆಸಿದರು. ಶ್ರೀರಾಮಕೃಷ್ಣರಲ್ಲಿಯೇ ತನ್ನ ಪ್ರಾಣವನ್ನು ಒಂದಾಗಿಸಿ, ಅವರ ನಾಮ–ಶ್ರವಣದಲ್ಲಿಯೇ ಆನಂದವನ್ನು ಪಡೆದು, ಅವರ ದಿವ್ಯಭಾವದಿಂದ ರಂಜಿತರಾದ ಶ್ರೀಮಾತೆಯವರು ಹೇಳಿರುವಂತೆ, ಸದಾ ಶ್ರೀರಾಮಕೃಷ್ಣರನ್ನೆ ನೆನೆಯುತ್ತ, ಪ್ರತಿಯೊಂದು ಕಾರ್ಯವನ್ನು ಶ್ರೀರಾಮಕೃಷ್ಣರ ಪ್ರೀತಿಗಾಗಿ ಮಾಡುತ್ತ, ನಮ್ಮ ಜೀವನವನ್ನು ಸಾರ್ಥಕಪಡಿಸಿಕೊಳ್ಳೋಣ.

ಜನನೀಂ ಶಾರದಾದೇವೀಂ ರಾಮಕೃಷ್ಣಂ ಜಗದ್ಗುರುಂ ।
ಪಾದಪದ್ಮೇ ತಯೋಃ ಶ್ರಿತ್ವಾ ಪ್ರಣಮಾಮಿ ಮುಹುರ್ಮುಹುಃ ॥